ಸಾಕ್ಷಿಯನ್ನು ದಿಃ **27.06.2023** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಸಿ.ಎಸ್ ವಕೀಲ**ರಿಂದ**

ನನ್ನ ಜನ್ಮ ದಿನಾಂಕ 04.06.1963 ಆಗಿದೆ. ಆ ಪ್ರಕಾರ ನನ್ನ ವಯಸ್ಸು ಈಗ 60 ವರ್ಷ. ನಾನು ಈಗ ನಿರ್ವಹಿಸುತ್ತಿರುವ ಕರ್ತವ್ಯಕ್ಕೆ ಯಾವ ದಿನಾಂಕದಂದು ಮೊಟ್ಟ ಮೊದಲ ಬಾರಿ ಹಾಜರಾಗಿ ರಿಪೋರ್ಟ್ ಮಾಡಿಕೊಂಡಿದ್ದೆ ಎಂಬ ಬಗ್ಗೆ ದಾಖಲೆ ಹಾಜರು ಪಡಿಸಬಲ್ಲೆ. ನಮ್ಮ ಊರಿನಲ್ಲಿ ಸಾಮಾನ್ಯವಾಗಿ ನನಗೆ ಎಲ್ಲರೂ ಪರಿಚಯಸ್ಥರು ಎಂದರೆ ಸರಿಯಲ್ಲ, ಕೆಲವರು ಗೊತ್ತಿದ್ದಾರೆ. ನಾನು ಹುಟ್ಟಂದಿನಿಂದಲೂ ನನ್ನ ಊರಿನವರ ಜೊತೆ ಬಾಂಧವ್ಯ ಇಟ್ಟಿಕೊಂಡಿದ್ದೇನೆ. ಹಾಗಾದರೆ ನಮ್ಮ ಊರಿನ ಎಲ್ಲಾ ಹಿರಿಯ ವೃಂದದವರು ನನಗೆ ಪರಿಚಯ ಇದ್ದಾರೆ ಎಂದರೆ ಹೆಚ್ಚು ಕಡಿಮೆ ಎಲ್ಲಾ ಪರಿಚಯ ಇದ್ದಾರೆ ಅವರಲ್ಲಿ ಕೆಲವು ಹಿರಿಯರು ಮರಣ ಹೊಂದಿದ್ದಾರೆ. ನಮ್ಮ ಊರಿನಲ್ಲಿ ಕೆಂಪಾರೆಗೌಡ ಮತ್ತು ಬೋರೇಗೌಡರು ಎಂಬುವವರು ಅನೇಕ ಜನ ಇದ್ದಾರೆ ಎಂದರೆ ನನಗೆ ತಿಳಿದ ಮಟ್ಟಿಗೆ ಅಂತಹ ಹೆಸರಿನವರು ಇಲ್ಲ. ನಮ್ಮ ಗ್ರಾಮದಲ್ಲಿ ಕೆಂಪಾರೆಗೌಡ ಮತ್ತು ಬೋರೇಗೌಡರು ಎಂಬುವವರು ಸುಮಾರು 8 ರಿಂದ 10 ಜನ ಇದ್ದಾರೆ, ಆದಾಗ್ಯೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾತ ನಮ್ಮ ತಂದೆಗೆ ನಿಡಿ. 11 ರ ಮೂಲಕ ಸ್ವತ್ತುಗಳನ್ನು ಬರೆದುಕೊಟ್ಟಿದ್ದಾರೆ ಎಂದು ಹೇಳಿದ್ದು, ಯಾವ ದಾಖಲೆ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಎಂ.ಆರ್ ಮೂಲಕ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಎಂ.ಆರ್ ಎಂಬುದು ರೆವಿನ್ಯೂ ದಾಖಲೆ ಅದು ಅನುಷ್ಟಾನಕ್ಕೆ ಬರಲು ಯಾವ ದಾಖಲೆಯ ಆಧಾರದ ಮೇಲೆ ಕೊಟ್ಟಿದ್ದೇವು ಎಂದರೆ ಸಾಕ್ಷಿ ಯಾವ ದಾಖಲೆ ಕೊಟ್ಟಿದ್ದರು ಎಂದು ಗೊತ್ತಿಲ್ಲ ಆದರೆ ಎಂ.ಆರ್ ಮೂಲಕ ನಮ್ಮ ತಂದೆಗೆ ಬಂದಿತ್ತು ಎನ್ನುತ್ತಾರೆ.

ನಮ್ಮ ತಂದೆ ದಿಃ 30.11.2013 ರಂದು ಮರಣ ಹೊಂದಿದ್ದಾರೆ. ನಮ್ಮ ತಂದೆ ಯಾವುದೆ ಕೆಲಸ ಮಾಡಿದ್ದರು ಅದು ನಮ್ಮ ಕುಟುಂಬದ ಒಳಿತಿಗಾಗಿಯೆ ಇರುತ್ತಿತ್ತು ಎಂದರೆ ಸರಿ. ನಮ್ಮ ತಂದೆ ಅವರ ಜೀವಿತಾವಧಿಯಲ್ಲಿ ದೈತನಕೆರೆ ಕಾವಲಿನ ಕೆಲವು ಸ್ವತ್ತುಗಳನ್ನು ಕಾಡು–ಮೇಡು ಕಡಿದು ತಮ್ಮ ಸ್ವಂತವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸುಳ್ಳು. ಈ ರೀತಿ ಅವರು ಸ್ವಯಾರ್ಜಿತವಾಗಿ ಸಂಪಾದಿಸಿದ ಸ್ವತ್ತುಗಳನ್ನು ನಾನು ಮತ್ತು ವಾದಿ ಕಬಳಿಸುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ವಾದಿಯ ಗಂಡನೊಂದಿಗೆ ಅನ್ಯೋನ್ಯವಾಗಿ ಇದ್ದೇನೆ ಎಂದರೆ ಎಲ್ಲರೊಂದಿಗೂ ಅನ್ಯೋನ್ಯವಾಗಿದ್ದೇನೆ. ನಾನು ಮತ್ತು ವಾದಿಯಾದ ನನ್ನ ತಂಗಿ 2 ನೇ ಪ್ರತಿವಾದಿಯನ್ನು ಒಕ್ಕಲೆಬ್ಬಿಸಬೇಕೆಂದು ಚಿತಾವಣೆ ಮಾಡಿ ವಾದಿ ಮುಖಾಂತರ ಈ ದಾವೆಯನ್ನು ಹೂಡಿಸಿದ್ದೇನೆ ಎಂದರೆ ಸುಳ್ಳು. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣದಲ್ಲಿ ನಾನು ಮತ್ತು ವಾದಿ ಜಂಟಿ ಸ್ವಾಧೀನದಲ್ಲಿ ಇದ್ದೇವೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ವಾದಿಯ ಮದುವೆ ನಿಖರವಾಗಿ ಯಾವ ದಿನಾಂಕದಂದು ನಡೆದಿದೆ ಎಂದು ಹೇಳಲಾಗುವುದಿಲ್ಲ, ಆದರೆ 1980 ರಿಂದ 85 ಒಳಗೆ ಆಗಿರಬಹುದು. ವಾದಿ ಮದುವೆ ಆದಾಗಿನಿಂದ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಅಲ್ಲೂ ಇರುತ್ತಾರೆ ನಮ್ಮ ಮನೆಯಲ್ಲೂ ಇರುತ್ತಾರೆ. ಮದುವೆ ಆದಾಗಿನಿಂದ ವಾದಿಯು ಗಂಡನ ಮನೆಯಲ್ಲಿಯೆ ಹೆಚ್ಚಾಗಿ ವಾಸವಾಗಿದ್ದು, ಆಗಾಗ್ಗೆ ತವರು ಮನೆಗೆ ಬಂದು ಹೋಗಿ ಮಾಡುತ್ತಾರೆ ಎಂದರೆ ಸರಿ.

ನನ್ನ ತಂದೆ ಅವರ ಜೀಳವಿತಾವಧಿಯಲ್ಲಿ ವಾದಿಯ ಭಾಗಾಂಶವಾಗಿ ಅವರ ಹೆಸರಿಗೆ ಸರ್ವೆ ನಂ.71/3 ರಲ್ಲಿ 1 ಎಕರೆ, 2 ಗುಂಟೆ, ಸರ್ವೆನಂ. 71/5 ರಲ್ಲಿ 19 ಗುಂಟೆ, ಸರ್ವೆನಂ, 73/5 ರಲ್ಲಿ 35 ಗುಂಟೆ ಸ್ವತ್ತುಗಳಿಗೆ ಖಾತೆ ಇಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ, ಆದರೆ ಖಾತೆ ಮಾತ್ರ ಇಡಿಸಿಕೊಟ್ಟಿದ್ದರು. ಸದರಿ ಸ್ವತ್ತುಗಳನ್ನು ವಾದಿಗೆ ಭಾಗಾಂಶವಾಗಿ ಕೊಟ್ಟಿದ್ದೆ ಎಂದು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿದ್ದರೆ ಅದು ಸುಳ್ಳಾ ಎಂದರೆ ಸುಳ್ಳು. ಹಾಗಾದಲ್ಲಿ ನಾನು ಸುಳ್ಳು ಮಾಹಿತಿಯನ್ನು ನೀಡಿ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನಾ ಎಂದರೆ ನನಗೆ

ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಲು ನಾನು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ, ನಾನೆ ಮಾಹಿತಿ ಕೊಟ್ಟಿದ್ದೇನೆ. ವಾದಿಯ ಭಾಗಾಂಶವಾಗಿ ನನ್ನ ತಂದೆ ಮೇಲ್ಕಂಡ ಸ್ವತ್ತುಗಳನ್ನು ನೀಡಿದ್ದಾರೆ ಎಂದು ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತಿಳಿಸಿದ್ದರೂ ಕೂಡ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 61 ರಂತೆ ನನ್ನ ತಂಗಿಯಾದ ವಾದಿ ಮತ್ತು ವಾದಿಯ ಮಕ್ಕಳಾದ ಕೆ.ಆರ್ ಚೈತ್ರಾ, ಕೆ.ಆರ್ ನಂದಿನಿ ಮತ್ತು ಕೆ.ಆರ್ ಗಣೇಶ್ ರವರು ಸೇರಿ ಮಲ್ಲಿಕ್ಯಾತನಹಳ್ಳಿ ಗ್ರಾಮದ ಹನುಮಂತಶೆಟ್ಟಿ ರವರ ಮಗ ಸಂಜೀವಶೆಟ್ಟಿ ರವರಿಗೆ ಮೇಲ್ಕಂಡ 3 ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ವಾದಿಗೆ ನಮ್ಮ ತಂದೆ ಈಗಾಗಲೆ ಭಾಗಾಂಶವಾಗಿ ಸ್ವತ್ತುಗಳನ್ನು ಕೊಟ್ಟಿದ್ದರೂ ಕೂಡ ನನ್ನ ಚಿತಾವಣೆ ಮೇರೆಗೆ 2 ನೇ ಪ್ರತಿವಾದಿಯಾದ ನನ್ನ ತಮ್ಮನಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದಿ ಈ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಐಟಂ ನಂ. 6 ರ ಸ್ವತ್ತು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತಾಗಿದ್ದು, ಅದನ್ನು 2 ನೇ ಪ್ರತಿವಾದಿಯ ಮಗನಾದ 3 ನೇ ಪ್ರತಿವಾದಿಗೆ ವಿಲ್ ಮೂಲಕ ದಿಃ 19.07.2012 ರಂದು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ನಮ್ಮ ತಂದೆಯ ಸ್ವಯಾರ್ಜಿತ ಅಲ್ಲ ನಮ್ಮ ಸ್ವತ್ತು ಮುಳುಗಡೆ ಆದ ಸಂಬಂಧ ಪರಿಹಾರ ಹಣದಿಂದ ಬಂದ ದಾವಾ 6 ನೇ ಐಟಂ ಸ್ವತ್ತನ್ನು ಕ್ರಯಕ್ಕೆ ಕೊಂಡಿದ್ದರು ಎನ್ನುತ್ತಾರೆ. ದಾವಾ 6 ನೇ ಐಟಂ ಸ್ವತ್ತನ್ನು ನಮ್ಮ ತಂದೆ ಸ್ವಯಾರ್ಜಿತವಾಗಿ ಸಂಪಾದನೆ ಮಾಡಿದ್ದರೂ ಕೂಡ ಅದು ಜಮೀನು ಮುಳುಗಡೆ ಆದ ಹಣದಿಂದ ಕೊಂಡಿದ್ದ ಸ್ವತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ರಾಜಕೀಯವಾಗಿ ಕೂಡ ಒಳ್ಳೆಯ ಹೆಸರು ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಈ ತಾಲ್ಲೂಕಿನ ಕಾಂಗ್ರೇಸ್ ಪಕ್ಷದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು ಎಂದರೆ ಸರಿ. ನಮ್ಮ ತಂದೆ ಡಿ.ದೇವರಾಜ್ ಅರಸ್ ರವರ ಸಮಕಾಲಿನವರಾಗಿ ಆ ಸಮಯದಿಂದಲೂ ರಾಜಕೀಯ ಮಾಡಿಕೊಂಡು ಬಂದಿದ್ದಾರೆ ಎಂದರೆ ಸುಳ್ಳು, ಆಗಿನಿಂದ ಮಾಡಿಲ್ಲ ಚಂದ್ರಪ್ರಭಾ ಅರಸ್ ರವರ ಕಾಲಿನಲ್ಲಿ ಮಾತ್ರ ಕಾಂಗ್ರೇಸ್ ಪಕ್ಷದಲ್ಲಿ ಇದ್ದರು. ಡಿ.ದೇವರಾಜ್ ಅರಸ್ ರವರ ಕಾಲದಿಂದಲೂ ನಮ್ಮ ತಂದೆ

ರಾಜಕೀಯದಲ್ಲಿ ಇದ್ದುಕೊಂಡು ಹೆಚ್.ಎಲ್ ತಿಮ್ಮೇಗೌಡರ ರವರ ಒಳನಾಡಿಯಾಗಿ ತಮ್ಮ ಕಾರ್ಯ ವೈಖರಿಯಿಂದ ರಾಜಕೀಯ ಮುತ್ಸದ್ದಿ ಆಗಿದ್ದ ಕಾರಣ ಅವರನ್ನು ಗುರುತಿಸಿ ಚಂದ್ರಪ್ರಭಾ ಅರಸ್ ರವರ ಕಾಲಿನಲ್ಲಿ ಕಾಂಗ್ರೇಸ್ ಪಕ್ಷದ ಅಧ್ಯಕ್ಷರಾಗಿ ನೇಮಿಸಲಾಗಿತ್ತು ಎಂದರೆ ಅವರ ಪ್ರಾಮಾಣಿಕತೆಯಿಂದ ಅಧ್ಯಕ್ಷರಾಗಿದ್ದರು. ನನ್ನ ತಂದೆಯವರು ರಾಜಕೀಯ ಒಡನಾಟದಿಂದ ಗಳಿಸಿದ್ದ ಆದಾಯದಿಂದ ದಾವಾ ಸ್ವತ್ತುಗಳನ್ನು ಖರಿದಿ ಮಾಡಿದ್ದರು ಎಂದರೆ ಸುಳ್ಳು. ನಮ್ಮ ತಂದೆ ಸ್ವಯಾರ್ಜಿತವಾಗಿ ಸಂಪಾದಿಸಿದ ದಾವಾ 6 ನೇ ಐಟಂ ಸ್ವತ್ತನ್ನು ತಮ್ಮ ಸೇವೆ ಮಾಡಿದಂತಹ 3 ನೇ ಪ್ರತಿವಾದಿಗೆ ಪ್ರೀತಿಯಿಂದ ವಿಲ್ ಮೂಲಕ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ 6 ನೇ ಐಟಂ ಸ್ವತ್ತು 3 ನೇ ಪ್ರತಿವಾದಿ ಹೆಸರಿಗೆ ವಿಲ್ ಮೂಲಕ ಖಾತೆ ಆಗಿದೆ ಎಂದರೆ ನಮ್ಮ ತಂದೆ ಯಾವುದೆ ವಿಲ್ ಮಾಡಿರಲಿಲ್ಲ. ನಮ್ಮ ತಂದೆ ತಮ್ಮ ಜೀವಿತಾವಧಿಯಲ್ಲಿ ವಿಲ್ ಮಾಡಿರುವ ವಿಚಾರ ನನಗೆ ತಿಳಿದಿದ್ದರೂ ಕೂಡ ವಿಲ್ ಮಾಡಿಲ್ಲ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಲ್ ಸುಳ್ಳು ಎಂದು ತೋರಿಸಲು ನಾನು ಯಾವುದೆ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನೆ ಮಾಡಿಲ್ಲ ಕಾರಣ ಈ ದಾವೆ ನಡೆಯುತ್ತಿದ್ದೆ ಎನ್ನುತ್ತಾರೆ.

ದಾವಾ 6 ನೇ ಐಟಂ ಸ್ವತ್ತು 3 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗಿರುವುನ್ನು ನಾನು ಎ.ಸಿ ರವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ ಎನ್ನುತ್ತಾರೆ. ಎ.ಸಿ ರವರ ನ್ಯಾಯಾಲಯದಲ್ಲಿ ಸದರಿ ಪ್ರಕರಣ 3 ನೇ ಪ್ರತಿವಾದಿ ಪರವಾಗಿ ಆದೇಶವಾಗಿದೆ ಎಂದರೆ ಸಾಕ್ಷಿ ಅದನ್ನು ನಾನು ಡಿ.ಸಿ ರವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನೆ ಎನ್ನುತ್ತಾರೆ. ಈ ರೀತಿ ನಾನು ಡಿ.ಸಿ ರವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ ಈ ನ್ಯಾಯಾಲಯಕ್ಕೆ ಯಾವುದೆ ದಾಖಲೆಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ಎ.ಸಿ ರವರ ನ್ಯಾಯಾಲಯದ ಆರ್.ಎ 77/2017 ರಲ್ಲಿ ಆದ ಆದೇಶದ ವಿರುದ್ಧ 3 ನೇ ಪ್ರತಿವಾದಿ ಡಿ.ಸಿ ರವರ ನ್ಯಾಯಾಲಯದಲ್ಲಿ ಆರ್.ಪಿ ಸಂಖ್ಯೆ 39/2022 ರಂತೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಮೇಲ್ಮನವಿ ಕೂಡ ಈಗಲೂ ವಿಚಾರಣಾ ಹಂತದಲ್ಲಿ ಇದೆ ಎಂದರೆ ಸರಿ. ಈ ಬಗ್ಗೆ 2 ನೇ ಪ್ರತಿವಾದಿ ಪರ

ವಕೀಲರು ಹಾಜರು ಪಡಿಸಿರುವ ಆರ್.ಪಿ. ಸಂಖ್ಯೆ 39/2022 ಮತ್ತು ಅದರ ಲಗತ್ತು ದಾಖಲೆಗಳನ್ನು ಕೋರಿಕೆ ಮೇರೆಗೆ **ನಿಡಿ.19 ಎಂದು ಗುರುತಿಸಲಾಯಿತು.**

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.